86
11

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣಪ್ಪ ಕಮಕನೂರ ಇವರು ನಿಯಮ 72 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 86 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ:**

11

**ವಿಷಯ :** ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ ಇವರಿಂದ 2014-15 ನೇ ಸಾಲಿನಲ್ಲಿ ಕೈಗೊಂಡ ಏರಿಯಲ್ ಫ್ಯೂಸ್ ಬೋರ್ಡ್ ಮತ್ತು ತಂತಿಬೇಲಿ (Fencing) ಅಳವಡಿಸುವ ತುಂಡು ಗುತ್ತಿಗೆ ಕಾಮಗಾರಿಗೆ ಸಂಬಂಧಿಸಿದ ತನಿಖೆಯ ಉದ್ದೇಶಪೂರ್ವಕ ವಿಳಂಬದ ಪರಿಣಾಮ ಕಳೆದ 10 ವರ್ಷಗಳಿಂದ ತಪ್ಪಿತಸ್ಥರಲ್ಲದ ಅಧಿಕಾರಿ/ ನೌಕರರು ಮುಂಬಡ್ತಿಯಿಂದ ವಂಚಿತರಾಗಿದ್ದು, ಈ ಪೈಕಿ ಹಲವು ನೌಕರರು ಈಗಾಗಲೇ ವಯೋನಿವೃತ್ತಿ ಮತ್ತು ಮರಣ ಹೊಂದಿರುತ್ತಾರೆ. ಇದರಿಂದ ಭಾದಿತ ನೌಕರರ ಕುಟುಂಬ ವರ್ಗ ಆರ್ಥಿಕ ಸಂಕಷ್ಟದಲ್ಲಿರುತ್ತದೆ. ಈ ಅನ್ಯಾಯವನ್ನು ಮನಗಂಡು ಕೂಡಲೇ ಮರು ತನಿಖೆಗಾಗಿ ಹೊರಡಿಸಿರುವ ಆದೇಶವನ್ನು ಹಿಂಪಡೆದು, ಉಳಿದ ಅಧಿಕಾರಿ / ನೌಕರರನ್ನು ಸಹ ಈ ಪ್ರಕರಣದಿಂದ ಮುಕ್ತಗೊಳಿಸಿ ಆದೇಶ ಹೊರಡಿಸಬೇಕೆಂದು ಕೋರಿರುವ ಬಗ್ಗೆ ಮಾನ್ಯ ಇಂಧನ ಸಚಿವರಲ್ಲಿ ಪ್ರಸ್ತಾಪಿಸಿರುವ ಬಗ್ಗೆ

*****

**ಉತ್ತರ** :- ಜೆಸ್ಕಾಂನ 7 ವಿಭಾಗಗಳ ವ್ಯಾಪ್ತಿಗಳಲ್ಲಿ ವಿದ್ಯುತ್ ವಿತರಣಾ ಪರಿವರ್ತಕ ಕೇಂದ್ರಗಳಿಗೆ ತಂತಿ ಬೇಲಿಗಳನ್ನು ಅಳವಡಿಸುವ ಹಾಗೂ ವಿತರಣಾ ಮಾರ್ಗಗಳ ವಿದ್ಯುತ್ ಕಂಬಗಳಿಗೆ ಏರಿಯಲ್ ಫ್ಯೂಸ್ ಬೋರ್ಡ್‌ಗಳನ್ನು ಅಳವಡಿಸುವ ಕಾಮಗಾರಿಗಳ ನಿರ್ವಹಣೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಜೆಸ್ಕಾಂ ಕಂಪನಿಗೆ ಸುಮಾರು ರೂ.43.17 ಕೋಟಿಗಳಷ್ಟು ಆರ್ಥಿಕ ನಷ್ಟ ಉಂಟಾಗಲು ಕಾರಣರಾಗಿ ಕರ್ತವ್ಯ ಲೋಪವೆಸಗಿದ ಆರೋಪದ ಹಿನ್ನೆಲೆಯಲ್ಲಿ 254 ಅಧಿಕಾರಿ ನೌಕರರುಗಳಿಗೆ ಒಟ್ಟು 31 ಆರೋಪಣಾ ಪಟ್ಟಿಗಳನ್ನು ಜಾರಿಗೊಳಿಸಲಾಗಿರುತ್ತದೆ. ನಂತರ ಸದರಿ ಅಧಿಕಾರಿ/ನೌಕರರ ವಿರುದ್ಧ ದಿನಾಂಕ: 26.05.2020 ರ ಆದೇಶಗಳಲ್ಲಿ ಇಲಾಖಾ ವಿಚಾರಣೆಗಳನ್ನು ಆದೇಶಿಸಿ ಶ್ರೀ. ಸಿ.ಆರ್.ಬೆನಕನಹಳ್ಳಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ರವರ ನೇತೃತ್ವದಲ್ಲಿ 3 ಸದಸ್ಯರನ್ನೊಳಗೊಂಡ ವಿಚಾರಣಾ ಸಮಿತಿಯನ್ನು ರಚಿಸಲಾಗಿರುತ್ತದೆ.

ವಿಚಾರಣೆಗಳನ್ನು ನಡೆಸಿ ವಿಚಾರಣಾ ಸಮಿತಿಯು ಸಲ್ಲಿಸಿರುವ ದಿನಾಂಕ: 30.09.2022 ರ ವಿಚಾರಣಾ ವರದಿಗಳಲ್ಲಿ 254 ಆರೋಪಿತ ಅಧಿಕಾರಿ/ನೌಕರರ ಪೈಕಿ 130 ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ರುಜುವಾತು /ಭಾಗಶಃ ರುಜುವಾತಾಗಿರುವುದಾಗಿಯೂ ಹಾಗೂ ಉಳಿದ 124 ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ತಿಳಿಸಿರುತ್ತದೆ. ಕಂಪನಿಗೆ ಉಂಟಾಗಿರುವ ಆರ್ಥಿಕ ನಷ್ಟ ರೂ.43.16 ಕೋಟಿಗಳಲ್ಲಿ ರೂ.17.38 ಕೋಟಿಗಳಿಗೆ ಸಂಬಂಧಿಸಿದ ಆರೋಪಗಳು ಮಾತ್ರ ರುಜುವಾತಾಗಿರುವುದಾಗಿ ವಿಚಾರಣಾ ಸಮಿತಿಯ ವರದಿಗಳಲ್ಲಿ ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಕಂಪನಿ ಕಾರ್ಯಾಲಯ / ವಲಯ ಕಚೇರಿ / ವೃತ್ತ ಕಚೇರಿಗಳಿಗೆ ಸಂಬಂಧಿಸಿದ 21 ಅಧಿಕಾರಿಗಳ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ವಿಚಾರಣಾ ಸಮಿತಿಯು ಸಲ್ಲಿಸಿದ ದಿನಾಂಕ: 30.09.2022 ರ ವಿಚಾರಣಾ ವರದಿಯ ಸಂಬಂಧ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಆದೇಶವನ್ನು ಕೋರಿ ವಿಷಯವನ್ನು ದಿನಾಂಕ: 06.03.2023 ರಂದು ಜರುಗಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನಿರ್ದೇಶಕರುಗಳ 138ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ವಿಷಯವನ್ನು ಪರಿಶೀಲಿಸಿದ ಮಂಡಳಿ ಸಭೆಯು ಈ ಕೆಳಕಂಡಂತೆ ಠರಾವು ಹೊರಡಿಸಿರುತ್ತದೆ.

A. To accept the report of the Enquiry committee. To withhold the Pension including DCRG and other benefits payable to Sri M.Mahadev, CEE (retired) permanently.

B. To Exonerate the 20 other accused officers/officials.

ಮಂಡಳಿ ಸಭೆಯ ಠರಾವಿನನ್ವಯ ಹೊರಡಿಸಲಾದ ದಿನಾಂಕ:21.03.2023 ರ ಅಂತಿಮ ಆದೇಶದಲ್ಲಿ ಜೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀ.ಎಂ.ಮಹದೇವ, ಮುಖ್ಯ ಇಂಜಿನಿಯರ್(ವಿ) (ನಿವೃತ್ತ) ರವರ ನಿವೃತ್ತಿ ಸವಲತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ ಹಾಗೂ ಆರೋಪಗಳು ರುಜುವಾತಾಗದ 20 ಅಧಿಕಾರಿ/ನೌಕರರನ್ನು ಆರೋಪ ಮುಕ್ತಗೊಳಿಸಲಾಗಿರುತ್ತದೆ.

ಮುಂದುವರೆದು, ವಿಚಾರಣಾ ಸಮಿತಿಯು ದಿನಾಂಕ: 30.09.2022 ರ ವರದಿಗಳಲ್ಲಿ ಜೆಸ್ಕಾಂ ಕಂಪನಿಗೆ ಉಂಟಾಗಿರುವ ಆರ್ಥಿಕ ನಷ್ಟ ರೂ.43.16 ಕೋಟಿಗಳಲ್ಲಿ ರೂ.17.38 ಕೋಟಿಗೆ ಸಂಬಂಧಿಸಿದ ಆರೋಪಗಳು ಮಾತ್ರ ರುಜುವಾತಾಗಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಇನ್ನುಳಿದ 30 ಇಲಾಖಾ ವಿಚಾರಣೆಗಳಲ್ಲಿ ವಿಚಾರಣಾ ಸಮಿತಿಯು ಸಲ್ಲಿಸಿದ ವಿಚಾರಣಾ ವರದಿಗಳ ಸಂಬಂಧ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಆದೇಶವನ್ನು ಕೋರಿ ವಿಷಯವನ್ನು ದಿನಾಂಕ: 08.02.2024 ರಂದು ಜರುಗಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನಿರ್ದೇಶಕರುಗಳ 144ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ವಿಷಯವನ್ನು ಪರಿಶೀಲಿಸಿದ ಮಂಡಳಿ ಸಭೆಯು ಈ ಕೆಳಕಂಡಂತೆ ಠರಾವು ಹೊರಡಿಸಿರುತ್ತದೆ.

a) RESOLVED that approval be and is hereby accorded to issue final orders in enquiry cases wherein charges are proved and the Disciplinary Authority was authorized to issue the same duly examining the replies of the accused employees and the enquiry report.

b) FURTHER RESOLVED that approval be and is hereby accorded to conduct detailed departmental enquiry afresh against the accused employees wherein charges are not proved for the reasons viz., Inspection team has not at all inspected the works, prosecution has failed to submit the connected files and witnesses before the Enquiry Committee, the Investigation team members have deposed that they have not inspected the subject works. This should be based on the records available with offices.

c) FURTHER RESOLVED that Managing Director, KPTCL be and is hereby authorized to take appropriate decision in cases where charges are not proved for the reason of IPSO-FACTO i.e., works were executed prior to issuance of Circular dated 09.01.2015 by the MD, GESCOM and no incumbency during the execution of works.

d) FURTHER RESOLVED that Director (A & HR), KPTCL be and is hereby authorized to issue necessary orders accordingly.

ಮಂಡಳಿ ಸಭೆಯ ಠರಾವಿನ ಕ್ರಮ ಸಂಖ್ಯೆ-(ಎ) ರನ್ವಯ ಆರೋಪ ರುಜುವಾತಾಗದಿರುವ 81 ಅಧಿಕಾರಿ/ನೌಕರರನ್ನು ಈಗಾಗಲೇ ಆರೋಪ ಮುಕ್ತಗೊಳಿಸಲಾಗಿರುತ್ತದೆ.

ಮಂಡಳಿ ಸಭೆಯ ಠರಾವಿನ ಕ್ರಮ ಸಂಖ್ಯೆ-(ಬಿ) ಮತ್ತು (ಸಿ) ರನ್ವಯ ತನಿಖಾ ತಂಡಗಳು ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿಲ್ಲದಿರುವ, ಶಿಸ್ತುಪ್ರಾಧಿಕಾರವು ಸಂಬಂಧಿಸಿದ ಕಡತ ಹಾಗೂ ಸಾಕ್ಷಿಗಳನ್ನು ವಿಚಾರಣಾ ಸಮಿತಿಯ ಮುಂದೆ ಹಾಜರುಪಡಿಸಲು ವಿಫಲವಾಗಿರುವ ಹಾಗೂ ತನಿಖಾ ತಂಡದ ಸದಸ್ಯರು ತಾವು ಕಾಮಗಾರಿಗಳನ್ನು ಪರಿಶೀಲಿಸಿರುವುದಿಲ್ಲವೆಂದು ಹಾಗೂ ಕಾಮಗಾರಿಗಳು ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಕಲಬುರಗಿ ರವರು ಹೊರಡಿಸಿದ ಸುತ್ತೋಲೆಯ ದಿನಾಂಕ:09.01.2015 ಕ್ಕಿಂತ ಮುಂಚಿತವಾಗಿ ನಿರ್ವಹಣೆಯಾಗಿರುವ ಕಾಮಗಾರಿಗಳ ನಿರ್ವಹಣೆಯ ಕುರಿತು ವಿಚಾರಣೆ ನಡೆಸದ ಕಾರಣಗಳಿಂದ 115 ಅಧಿಕಾರಿ / ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದುವರೆಸಿ, ವಿಚಾರಣಾ ವರದಿಗಳನ್ನು ಸ್ವೀಕರಿಸಿದ ಕೂಡಲೇ ಅಂತಿಮ ಆದೇಶಗಳನ್ನು ಹೊರಡಿಸಲಾಗುವುದು.

ಪ್ರಸ್ತುತ ಇಲಾಖಾ ವಿಚಾರಣೆಗಳಲ್ಲಿ ಅಂತಿಮ ಆದೇಶಗಳನ್ನು ಹೊರಡಿಸಿ 102 ಅಧಿಕಾರಿ/ನೌಕರರನ್ನು ಆರೋಪ ಮುಕ್ತಗೊಳಿಸಲಾಗಿರುತ್ತದೆ ಹಾಗೂ ಈಗಾಗಲೇ ಆರೋಪ ರುಜುವಾತಾಗಿರುವ 37 ಅಧಿಕಾರಿ/ನೌಕರರ ವಿರುದ್ಧ ಅಂತಿಮ ಆದೇಶಗಳನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 54 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು